

ಆದರೆ ಕುದುರೆ ಪ್ರಯಾಣದ ಅರ್ಧ ದಾರಿಯವರೆಗೆ ಮಾತ್ರ. ಅಲ್ಲಿಂದ ಮುಂದೆ ನಾಲ್ಕು ಕಾಲುಗಳ ನಡಿಗೆ ಆಗುವುದಿಲ್ಲ; ಕುದುರೆಯೂ ಹೋಗಲಾಗದು. ಅರ್ಧ ದಾರಿಯಿಂದ ಮರಳಿ ಕೆಳಗೆ ಇಳಿಯುವ ಕುದುರೆಗಳು ಮೇಲೇರುವ ಯಾತ್ರಿಕರಿಗೆ ಎದುರಾಗಿ ಕಿರಿಕಿರಿ ಆಗುವುದೂ ಇದೆ.

ಬೆಟ್ಟದ ಮೇಲ್ಭಾಗವು ತೆಳ್ಳನೆಯ ಹಿಮದಿಂದ ಆವೃತವಾಗಿದೆ. ಬೆಟ್ಟದ ಕೆಳಗೆ ನಿಂತು ಮೇಲೆ ನೋಡಿದರೆ ಬುದ್ಧ ದೇವಾಲಯವೇನೂ ಕಾಣಿಸದು. ಬೆಟ್ಟದ ಅರ್ಧಾಂಶ ಮಣ್ಣಿನ ದಾರಿಯಲ್ಲಿ ಕ್ರಮಿಸಿದಂತೆ ಸಿಗುವುದು ವಿಶಾಲವಾದ ಜಾಗ. ತುಸು ವಿಶ್ರಮಿಸಿ, ನಿಂತೋ ಕುಳಿತೋ ಪ್ರಕೃತಿಯೊಡನೆ ಸಲ್ಲಾಪವಾಡುತ್ತಾ, ಫೋಟೋ ತೆಗೆಯುತ್ತಾ ಆಯಾಸ ಪರಿಹರಿಸಿಕೊಳ್ಳಬಹುದು. ಹಾಗೆಯೇ ಇಲ್ಲಿರುವ ಚಿಕ್ಕ ಕ್ಯಾಂಟೀನಿನಲ್ಲಿ ಕಾಫಿ/ಚಹಾ ಕುಡಿದು  ಪ್ರಯಾಣ ಮುಂದುವರಿಸಬಹುದು.

ಅಲ್ಲಿಂದಾಚೆಗೆ ಎರಡು ಬೆಟ್ಟಗಳ ನಡುವೆ ಪಯಣ ಮುಂದುವರಿಯುತ್ತದೆ. ಸುಮಾರು 1000  ಮೆಟ್ಟಲುಗಳನ್ನು ಹತ್ತಬೇಕು. ಕಾಲುಗಳು ಮೆಟ್ಟಿಲು ಹತ್ತುತ್ತಾ ಇದ್ದಂತೆಯೇ ಕಣ್ಣುಗಳು ಸುತ್ತಲಿನ ರಮಣೀಯ ಪ್ರಕೃತಿ ಸೌಂದರ್ಯವನ್ನು ಸೆರೆ ಹಿಡಿಯುತ್ತವೆ. ಕೈಯಲ್ಲಿರುವ ಕ್ಯಾಮೆರಾ ಕ್ಲಿಕ್ಕಿಸುತ್ತಲೇ ಜತೆಗೂಡುತ್ತದೆ. ನಾವು ಕಷ್ಟ ಪಟ್ಟು ಏದುಸಿರು ಬಿಡುತ್ತಾ, ಕಾಲೆಳೆಯುತ್ತಾ ಮೆಲ್ಲನೆ ಬೆಟ್ಟ ಹತ್ತುತ್ತಿದ್ದರೆ, ಚಿಕ್ಕ ಮಕ್ಕಳನ್ನು ಎತ್ತಿಕೊಂಡ ಭೂತಾನಿನ ಅಮ್ಮಂದಿರುವ ಸರಸರನೆ ಬೆಟ್ಟ ಹತ್ತುತ್ತಾ ನಮ್ಮನ್ನು ಹಿಂದಕ್ಕೆ ಹಾಕಿ ಮುನ್ನಡೆಯುವುದನ್ನು ನೋಡಿ ಬೆಕ್ಕಸ ಬೆರಗಾದೆವು. ನಮ್ಮ ಬಗ್ಗೆಯೇ ನಮಗೆ ಸ್ವಲ್ಪ ನಾಚಿಕೆಯೂ ಆಯಿತು.

ಬೆಟ್ಟದ ಮೇಲೆ ಹಸಿರು ಹೊದ್ದು ಮಲಗಿರುವ ಪ್ರಕೃತಿ ಮಾತೆ! ದಟ್ಟ ಹಸಿರು ತುಂಬಿರುವ ಮರಗಿಡಗಳು, ತಲೆ ಎತ್ತಿ ನಿಂತಿರುವ ಬಂಡೆಗಳು. ಕೆಲವೆಡೆ ಬಂಡೆಗಳ ಮೇಲಿನಿಂದ ರಭಸವಾಗಿ ಧುಮ್ಮಿಕ್ಕುವ ಜಲಪಾತಗಳು. ನಯನಮನೋಹರ ದೃಶ್ಯ. ಹತ್ತಿ ಬಂದ ಆಯಾಸವೆಲ್ಲ ಕ್ಷಣಮಾತ್ರದಲ್ಲಿ ದೂರ!

ಟೈಗರ್ ನೆಸ್ಟ್ ತಲುಪುವ ಕೊನೆಯ ಹಂತದ ನಡಿಗೆ ಸುಮಾರು 200 ಅಡಿ

